ಇಲಾಖೆ / ವಿಷಯ: DEPARTMENT / SUBJECT: ಮಾನ್ಯ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ಪ್ರಜಾವಾಣಿ    ದಿನಾಂಕ : DATE : 20/07/2019

ಪ್ರ. ವಾ. 20-7-19

# ದರಿದ್ರ, ಹೊಲಸು ಎಲ್ಲವೂ ಹೊರಗೆ ಬರಲಿ: ಸಭಾಧ್ಯಕ್ಷರ ಆಕ್ರೋಶ

ಬೆಂಗಳೂರು: 'ಹೊಟ್ಟೆಯೊಳಗೆ ಇರುವ ಎಲ್ಲ ಹೊಲಸು ಹೊರಗೆ ಬರಲಿ. ನಾನು ಯಾರಿಗೂ ಅಡ್ಡಿ ಮಾಡುವುದಿಲ್ಲ. ಈ ವ್ಯಾಪಾರ, ದರಿದ್ರ ಎಲ್ಲವನ್ನೂ ಇಲ್ಲಿ ಹೇಳಿಕೊಳ್ಳಿ. ಎಲ್ಲವನ್ನೂ ಜನರು ನೋಡಲಿ. ಅವರೇ ತೀರ್ಮಾನ ಮಾಡಲಿ' ಎಂದು ವಿಧಾನಸಭಾಧ್ಯಕ್ಷ ಕೆ.ಆರ್.ರಮೇಶ್ ಕುಮಾರ್ ಆಕ್ರೋಶದಿಂದ ನುಡಿದರು.

ವಿಧಾನಸಭೆಯಲ್ಲಿ ಶುಕ್ರವಾರ 'ಶಾಸಕರ ಖರೀದಿ' ಬಗ್ಗೆ ಕೆಲವು ಶಾಸಕರು ಪ್ರಸ್ತಾಪ ಮಾಡಿದಾಗ ಅವರು ಈ ರೀತಿ ಪ್ರತಿಕ್ರಿಯಿಸಿದರು. 'ಶಾಂತವೇರಿ ಗೋಪಾಲಗೌಡರಂತಹ ಮಹನೀಯರು ಇದ್ದ ವಿಧಾನಸಭೆಯ ಇದು ಎಂಬ ಅನುಮಾನ ಮೂಡುತ್ತಿದೆ. ಅವರು ಮುಖ್ಯಮಂತ್ರಿ ಆಗಿರಲಿಲ್ಲ. ಬಹಳ ಸಲ ಶಾಸಕರೂ ಆಗಿರಲಿಲ್ಲ. ಅವರಿದ್ದಂತಹ ಭೂಮಿಗೆ ಈ ದರಿದ್ರ ಸ್ಥಿತಿ ಬಂದಿದೆಯಾ' ಎಂದು ಅವರು ಹೇಳಿದರು.

'ತಮ್ಮ ಪಕ್ಷದ ಶಾಸಕರ ಮೇಲೆ ಬಿಜೆಪಿಯವರು ಕಾವಲು ಇಟ್ಟಿದ್ದಾರೆ. ನೀವು ಆ ಕೆಲಸವನ್ನೂ ಮಾಡಲಿಲ್ಲವಲ್ಲ. ಅವರ ಮೇಲೆ ನಿಗಾ ಇಡುವ ಸಮಯದಲ್ಲಿ ನಿದ್ದೆ ಮಾಡಿದ್ದೀರಿ' ಎಂದು ಆಡಳಿತ ಪಕ್ಷದ ನಾಯಕರ ಮೇಲೆಯೂ ಚಾಟಿ ಬೀಸಿದರು.

'ನಾನು ಇಲ್ಲಿ ಬೆಂಕಿಯ ಮೇಲೆ ಕುಳಿತಿದ್ದೇನೆ. ನನ್ನ ಮಾತು, ತೀರ್ಪು ಇತಿಹಾಸ ಆಗಬೇಕು ಎಂಬುದು ನನ್ನ ಇಚ್ಛೆ. ನಿಯಮ ಬಿಟ್ಟು ನಾನು ಇಂಚೂ ಕದಲುವುದಿಲ್ಲ. ಆದರೂ, ನನ್ನ ವಿರುದ್ಧ ಕೆಲವು ಹಿರಿಯರು ಹಾಗೂ ಕೆಲವರು ಆರೋಪ ಮಾಡಿದ್ದಾರೆ. ಪಕ್ಷಪಾತ ಮಾಡಿ ಬದುಕುವ ಸ್ಥಿತಿ ನನಗೆ ಬಂದಿಲ್ಲ. ನನ್ನ ಚಾರಿತ್ರ್ಯ ವಧೆ ಮಾಡುವವರು ನೂರು ಸಲ ಹಿಂತಿರುಗಿ ನೋಡಿ. ಆಗ ನೀವೇನೂ ಎಂಬುದು ಗೊತ್ತಾಗುತ್ತದೆ' ಎಂದು ಅವರು ವಾಗ್ದಾಳಿ ನಡೆಸಿದರು.

